"ಇದು ಯಾರದ್ದೇ ಕೆಲಸ ಆಗಿರಲಿ. ನನ್ನನ್ನು ಕೋಣ ಮಾಡಿದ ಬೆರಳುಗಳನ್ನು ನಾನು ಮುರಿದೇ ಮುರಿಯುತ್ತೇನೆ."

ಮಮ್ಮುಮುಕ್ರಿಯ ಬೆರಳುಗಳು ತಬಲದ ಮೇಲೆ ಕುಣಿದಂತೆ ಒಮ್ಮೆ ನಡುಗಿ ಮಡಚಿಕೊಂಡವು.

ಖತೀಬರ ಕಣ್ಣು ಮುಕ್ರಿಯ ಮೇಲೆ.

ಮುಕ್ರಿಯ ತಲೆ ಬಾಗಿತು.

ಶಿಕ್ಷೆ ಘೋಷಣೆಯಾಗಿಯೇ ಬಿಟ್ಟಿತು.

"ಮಮ್ಮುಮುಕ್ರಿ ಇನ್ನು ಮುಂದೆ ಮದರಸದಲ್ಲಿ ಕಲಿಸುವುದು ಬೇಡ, ಮಸೀದಿಯಲ್ಲಿ ನೀರು ಗೋರುವುದು, ನಮಾಜಿಗೆ ಇಕಾಮತ್ ಕೊಡುವುದು ಮತ್ತು ಚಾಪೆ ಹಾಸುವ ಕೆಲಸ ಮಾತ್ರ ಮಾಡಿದರೆ ಸಾಕು."

"ಒಬ್ಬ ಮುಕ್ರಿ ಮಾಡಬೇಕಾದ ಕೆಲಸವಾ ಇದು? ಏನಿಲ್ಲದಿದ್ದರೂ ಈ ಮನುಷ್ಯ ನಾಲ್ಕಕ್ಷರ ಕಲಿಸುವ ಉಸ್ತಾದ್ ಅಲ್ಲವೇ? ಚಿತ್ರ ಬಿಡಿಸುವುದು ಹರಾಂ ಅಂತ ಎಲ್ಲರಿಗೂ ಗೊತ್ತು. ಆದರೂ ಪರವಾಗಿಲ್ಲವೆಂದರೆ, ಬಿಡಿಸುವ ಚಿತ್ರ ಎಂತದು? ಗಣಪತಿ, ಕೋಣ, ಯೇಸುಕ್ರಿಸ್ತ... ಮೊನ್ನೆ ಮದರಸದ ಒಬ್ಬ ಹುಡುಗನ ಪುಸ್ತಕ ತೆಗೆದು ನೋಡಿದೆ. ಎಂತ ಹೇಳೋದು? ಬಿಡಿಸಿರುವ ಚಿತ್ರ ಎಂತ ಗೊತ್ತಾ? ನಕ್ಷತ್ರಗಳಿಂದ ಅಲಂಕರಿಸಿದ ಮಸೀದಿ ಮಿನಾರ. ಅದರಡಿಯಲ್ಲಿ ಮೇಯುತ್ತಿರುವ ಕತ್ತೆಗಳು. ಇದಕ್ಕೆಲ್ಲ ಎಂತ ಅರ್ಥ?"

ಚಾರ್ಜ್‌ಶೀಟ್ ಓದುವ ಜಡ್ಜಿನ ಮುಂದೆ ಪ್ರತಿಮೆಯಂತೆ, ಕಣ್ಣುಮುಚ್ಚಿ ತನ್ನನ್ನು ತಾನೇ ಶಪಿಸುತ್ತಾ ನಿಂತರು.

"ಮಮ್ಮುಮುಕ್ರಿ, ನಿಮಗೇನಾದರು ಹೇಳಲಿಕ್ಕೆ ಉಂಟಾ?"

ಲಾಳ ಜಡಿಸಿಕೊಳ್ಳುವ ಪ್ರಾಣಿಯಂತೆ ಮಮ್ಮುಮುಕ್ರಿ ಅವರ ಮುಂದೆ ನಡುಗುತ್ತಾ ಕೂತಿದ್ದರು. ಚೂರೇ ಚೂರು ದನಿ ಏರಿಸಿದರೂ ಗಂಟಲು ಒಡೆದು ಹೋಗಬಹುದು ಎಂಬ ಭಯದಲ್ಲಿ ಮುಕ್ರಿ ಹೇಳಿದರು:

"...ರಬ್ಬ್ ಸುಬ್ಹಾನತ್ತಆಲ ನಿಜ್ಜಾ. ನನಗೊಂದೂ ಗೊತ್ತಿಲ್ಲ ಅಧ್ಯಕ್ಷರೆ."

"ಇದೆಲ್ಲ ಮಾಡಿದ್ದು ನೀವೆ ತಾನೆ?"

"ಹೌದು ನಾನೇ. ಆದರೆ, ನನಗೊಂದೂ..."

ರಾತ್ರಿ ಇಶಾ ನಮಾಜಿನ ನಂತರ ಜನರೆಲ್ಲ ಹೋದ ಮೇಲೆ ಖತೀಬರು ಮಮ್ಮುಮುಕ್ರಿಯನ್ನು ಬಳಿಗೆ ಕರೆದರು. ಪ್ರೀತಿ ಮತ್ತು ಸಂತಾಪದೊಂದಿಗೆ ಮಾತಿಗಿಳಿದರು:

"ಮಮ್ಮುಮುಕ್ರಿ, ನೀವು ಹೇಳುವುದೆಲ್ಲ ನಿಜವಾ? ನಿಮಗೆ ಗೊತ್ತಿಲ್ಲದೆ ನೀವು ಚಿತ್ರ ಬಿಡಿಸುವುದಾ?"

ಮುಕ್ರಿ ತನ್ನ ಕೈಬೆರಳುಗಳನ್ನು ದಿಟ್ಟಿಸುತ್ತಾ ನಡುಗುವ ದನಿಯೊಂದಿಗೆ ತಪ್ಪೊಪ್ಪಿಕೊಂಡರು.

"ಎಷ್ಟು ಪ್ರಯತ್ನಿಸಿದರೂ ನನ್ನಿಂದ ನಿಯಂತ್ರಿಸೋದಕ್ಕೆ ಆಗುತ್ತಿಲ್ಲ ಉಸ್ತಾದರೇ. ಚಿತ್ರ ತಾನಾಗಿ ಮೂಡುತ್ತದೆ."

ಸ್ವಲ್ಪ ಹೊತ್ತು ಮೌನವಾದ ಖತೀಬರು, ಏನೋ ಅರ್ಥವಾದವರಂತೆ ಶೂನ್ಯದಲ್ಲಿ ಕಣ್ಣು ನೆಟ್ಟು ಒಮ್ಮೆ ದೀರ್ಘವಾಗಿ ಹೂಂಗುಟ್ಟಿದರು.

"ಹೂಂ, ಇದು ಜಿನ್ನಿನ ಕೆಲಸ. ಜಿನ್ನುಗಳಲ್ಲಿ ಒಳ್ಳೆಯ ಜಿನ್ನುಗಳು ಇರುವ ಹಾಗೆ ಕೆಟ್ಟ ಜಿನ್ನುಗಳೂ ಇರುತ್ತವೆ ಅಂತ ನಿಮಗೆ ಗೊತ್ತುಂಟಲ್ಲ? ಆದರೆ, ಇವೆರಡರ ನಡುವೆ ಇರುವ ಒಂದು ಜಿನ್ನಿನ ಬಗ್ಗೆ ಪುಕ್ತಿಯಾರ್ ಕಿತಾಬಿನಲ್ಲಿ ಉಲ್ಲೇಖ ಮಾಡಿದ್ದಾರೆ. ಹಳೆಯ ಕಿತಾಬ್ ಅದು. ಹೊರಗಡೆ ಸಾಧುವಿನಂತೆ ಕಾಣುವ ಈ ಜಿನ್ನು ನಮ್ಮ ಕೈಯಲ್ಲಿ ಇಂತಾ ಕೆಲಸಗಳನ್ನೆಲ್ಲ ಮಾಡಿಸುತ್ತದೆ. ಚಿತ್ರ